# ಹಳ್ಳಿಗಳ ಉದ್ಧಾರಕ್ಕೆ ಅಧಿಕಾರಿ ಆಗಬೇಕು

**ನವ್ಯಾ ಉದಯದ 'ನಯನತಾರಾ'ದ ರಶ್ಮಿ**

■ ರಾಘವೇಂದ್ರ ಕೆ.



◆ **ನಿಮ್ಮ ಪಾತ್ರಕ್ಕೆ ನೀವೆಷ್ಟು ಹೊಂದಿಕೆ ಆಗುತ್ತೀರಿ?**

ವೈಯಕ್ತಿಕವಾಗಿ ಆಚಾರ–ವಿಚಾರ ಅಷ್ಟಾಗಿ ಗೊತ್ತಿಲ್ಲ. ರಶ್ಮಿಗೆ ಸಂಪ್ರದಾಯದ ಬಗ್ಗೆ ಆಳವಾದ ತಿಳಿವಳಿಕೆಯಿದೆ. ಅನುಭವಿಗಳು ಹಿರಿಯರಂತೆ ಪರಂಪರೆಯನ್ನು ಆಕೆ ತಿಳಿದುಕೊಂಡಿದ್ದಾಳೆ. ಹಳ್ಳಿಯಲ್ಲಿ ಹುಟ್ಟಿ ಬೆಳೆದ ಅವಳಿಗೆ ಮುಗ್ಧತೆ ವಿಶೇಷ ಗುಣವೇ ಸರಿ. ಈ ವಿಚಾರದಲ್ಲಿ ನನಗೆ ಹೊರಗಿನ ಪಾತ್ರ ಎಂದು ಅನ್ನಿಸುತ್ತದೆ. ಆದರೆ, ಮಾತು ನಡತೆಯಲ್ಲಿ ತುಂಬ ಹೋಲಿಕೆಯಿದೆ. ಹಾಗಾಗಿ ಸಾಕಷ್ಟು ಭಿನ್ನತೆಯ ನಡುವೆ ಸಮಾನ ಗುಣಧರ್ಮ ಇದೆ. ಗೊತ್ತಿಲ್ಲದೆ ಇರುವ ಸಂಪ್ರದಾಯವನ್ನು ತಿಳಿಯಲು ಸಹಾಯವಾಗುತ್ತದೆ.

◆ **ನಟನೆಯ ಆಸೆ ಹುಟ್ಟಿದ್ದು ಹೇಗೆ?**

ಕೋವಿಡ್ ಸಮಯದದಲ್ಲಿ ಮನೆಯಲ್ಲಿ ಸುಮ್ಮನೆ ಇದ್ದಾಗ ಅಭಿನಯಿಸುವ ಮನಸು ಬಂತು ಅಷ್ಟೇ. ಅಲ್ಲಿಯ ತನಕ ನಟನೆ ಬಗ್ಗೆ ಯಾವ ಯೋಚನೆಯೂ ಇರಲಿಲ್ಲ. ಅದಕ್ಕಾಗಿ ಸಣ್ಣ ಪ್ರಯತ್ನವೂ ನನ್ನಿಂದ ಆಗಿಲ್ಲ. ನಾಟಕ–ನಟನೆ ಎಂದು ಅಭ್ಯಾಸವನ್ನೂ ಮಾಡಿರಲಿಲ್ಲ. ನೋಡೋಣ ಒಂದು ಪ್ರಯತ್ನ ಎಂದು ಬಂದವಳಿಗೆ ಅವಕಾಶ ಸಿಕ್ಕಿದೆ. ಇದೆಲ್ಲ ಆಕಸ್ಮಿಕ ಎಂದೇ ಹೇಳಬೇಕು. ಸಾಮಾಜಿಕ ಮಾಧ್ಯಮದಲ್ಲಿ ಕಿರುತೆರೆಯ ಮ್ಯಾನೇಜರೊಬ್ಬರ ಪರಿಚಯ ಆಯಿತು. ಅವರಿಗೆ ನನ್ನ ಕೋರಿಕೆ ತಿಳಿಸಿದೆ. ಫೋಟೊ ತರಿಸಿಕೊಂಡರು. ಒಮ್ಮೆ ಸ್ಕ್ರಿಪ್ಟ್ ಕಳಿಸಿದರು. ಅದಕ್ಕೆ ವಿಡಿಯೊ ಮಾಡಿ ಕಳಿಸಿದೆ. ಅದಾಗಿ ತಿಂಗಳುಗಳು ಕಳೆದರು ಏನೂ ಪ್ರತಿಕ್ರಿಯೆ ಬರಲಿಲ್ಲ. ಇದು ಯಾವುದೋ ಸುಳ್ಳು ಇರಬೇಕು ಎಂದು ಸುಮ್ಮನಾದೆ. ಚಿತ್ರೀಕರಣದ ಮೊದಲು ಲುಕ್ ಟೆಸ್ಟ್‌ಗೆ ಅಂತ ಕರೆದರು. ನನಗೆ ನಂಬಿಕೆ ಇರದಿದ್ದರೂ ಪರೀಕ್ಷೆ ಮಾಡೋಣ. ಹೇಗೂ ಬಿಡುವಾಗಿದ್ದೇನೆ ಎಂಬ ಅನುಮಾನದಲ್ಲೇ ಹೋದೆ. ಆಯ್ಕೆ ಮಾಡಿದರು. ಒಂದು ವಾರದ ಮಟ್ಟಿಗೆ ಬರುವ ಅತಿಥಿ ಪಾತ್ರ ಅಂದಿದ್ದರು. ಕ್ರಮೇಣ ಇದು ಕಥೆಗೆ ಅನಿವಾರ್ಯವಾಗಿ ಮುಂದುವರಿಯುತ್ತಿದೆ. ನನ್ನ ಫ್ರೆಂಡ್ಸ್ ನಟನೆ ಮಾಡಲು ಹುರಿದುಂಬಿಸಿದ್ದರಿಂದ ಇಲ್ಲಿಗೆ ಬಂದಿದ್ದೇನೆ.

◆ **ನಿಮ್ಮ ಕನಸು ಏನಾಗಿತ್ತು?**

ಗಗನಸಖಿ ಆಗಬೇಕು ಎಂದು ಮನಸಾರೆ ಕನಸು ಕಂಡಿದ್ದೆ. ಮೊದಲಿನಿಂದ ಕನ್ನಡಕ ಬಳಸುತ್ತಿದ್ದೆ. ಕೋವಿಡ್ ಬಂದ ನಂತರ ದೃಷ್ಟಿ ದೋಷದಲ್ಲಿ ಒಂದಿಷ್ಟು ಏರುಪೇರಾಯಿತೋ ಏನೋ ಗೊತ್ತಿಲ್ಲ. ಅದರಿಂದ ನನ್ನ ಕನಸು ಭಗ್ನಗೊಂಡು ತುಂಬ ನಿರಾಸೆ ಆಯಿತು. ಗಗನಸಖಿಯೇ ಆಗಬೇಕು ಎಂದು ಕೋರ್ಸ್ ಕೂಡ ಮಾಡಿದ್ದೆ. ಅನುಭವಕ್ಕಾಗಿ ಪಿ.ವಿ.ಆರ್.ನಲ್ಲಿ ಆರು ತಿಂಗಳು ಕೆಲಸವನ್ನೂ ಮಾಡಿದ್ದೆ. ಅಲ್ಲಿ ಗೋಲ್ಡನ್ ಕ್ಲಾಸ್‌ನಲ್ಲಿ ನಿರ್ವಹಿಸುವ ಕೆಲಸ ಏರ್‌ಲೈನ್ಸ್ ಹಾಗೇ ಇರುತ್ತದೆ. ಇಂಡಿಗೊ ಏರ್‌ಲೈನ್ಸ್‌ಗೆ ಅರ್ಜಿಯನ್ನು ಹಾಕಿದೆ. ನೇಮಕಾತಿ ಪ್ರಕ್ರಿಯೆಯಲ್ಲಿ ವೈದ್ಯಕೀಯ ಪರೀಕ್ಷೆಗೂ ಹೋದೆ. ಆಗ ದೃಷ್ಟಿ ಸಂಬಂಧಿತ ತೊಂದರೆ ಇರುವುದು ಗೊತ್ತಾಯಿತು. ಗಗನಸಖಿ ಕನ್ನಡಕ ಹಾಕುವಂತಿಲ್ಲ. ಲೆನ್ಸ್ ಹಾಕಬೇಕು. ನನ್ನ ಸಮಸ್ಯೆಗೆ ಲೆನ್ಸ್ ಹಾಕುವುದಕ್ಕಿಂತ ಮುಂಚೆ ಶಸ್ತ್ರ ಚಿಕಿತ್ಸೆ ಬೇಕಿದೆ ಎನ್ನುವುದು ಗೊತ್ತಾಯಿತು. ಗಗನಸಖಿ ಆಗುವ ಅವಕಾಶ ಇಲ್ಲದಾಯಿತು. ಅಲ್ಲಿಗೆ ಆ ಆಸೆಯನ್ನು ಬಿಟ್ಟೆ. ಒಳ್ಳೆಯ ಅವಕಾಶಗಳು ಸಿಕ್ಕರೆ ಅಭಿನಯವನ್ನು ಮುಂದುವರಿಸುತ್ತೇನೆ. ಇಲ್ಲದಿದ್ದರೆ ಸಿವಿಲ್ ಸರ್ವೀಸ್‌ಗೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದೇನೆ. ಕೆ.ಪಿ.ಎಸ್.ಸಿ.ಯ ಪರೀಕ್ಷೆ ಎದುರಿಸಿ ಸರ್ಕಾರಿ ಉದ್ಯೋಗಕ್ಕೆ ಹೋಗುತ್ತೇನೆ. ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡಬೇಕು ಎನ್ನುವ ಉತ್ಸಾಹ ಇದೆ. ತಿಂಗಳಲ್ಲಿ ಐದು ದಿನ ಮಾತ್ರ ಶೂಟಿಂಗ್ ಇರುವುದರಿಂದ ನನ್ನ ಓದು ಕೂಡ ಸುಗಮವಾಗಿ ಸಾಗಿದೆ.

◆ **ಮೊದಲ ದಿನದ ಶೂಟಿಂಗ್ ಮತ್ತು ಧಾರಾವಾಹಿಯ ಮೊದಲ ಕಂತಿನ ಪ್ರಸಾರದ ದಿನ ಹೇಗಿತ್ತು?**

ಮೊದಲ ಬಾರಿಗೆ ಬಣ್ಣ ಹಚ್ಚಿದ್ದೆ. ತುಂಬ ಕಷ್ಟ ಆಗ್ತಾ ಇತ್ತು. ಡೈಲಾಗ್ ನೆನಪು ಇಟ್ಟುಕೊಳ್ಳಲು ಆಗುತ್ತಿರಲಿಲ್ಲ. ಮೊದಲ ಒಂದು ವಾರ ಬಿಟ್ಟು ಹೋಗಲಾ ಅಂತ ಅನ್ನಿಸಿತ್ತು. ಕ್ಯಾಮೆರಾ ಭಯಕ್ಕೆ ಎಲ್ಲ ಮರೆತು ಹೋಗುತ್ತಿತ್ತು. ಸಹನಟರ ಪ್ರೋತ್ಸಾಹದಿಂದ ಅಭಿನಯಿಸುವ ಯತ್ನ ಮಾಡಿದೆ. ಕ್ರಮೇಣ ಅಲ್ಲಿನ ವಾತಾವರಣಕ್ಕೆ ಹೊಂದಿಕೊಂಡೆ. ಈಗ ನನ್ನ ಪಾತ್ರವನ್ನು ತುಂಬ ಖುಷಿಯಿಂದ ಮಾಡುತ್ತಿದ್ದೇನೆ. ಮೊದಲ ದಿನ ನೋಡಿದಾಗ ಮನೆಯಲ್ಲಿ ಎಲ್ಲ ಖುಷಿಪಟ್ಟರು. ಕೆಲವೇ ದಿನಗಳ ಪಾತ್ರ ಅಂದುಕೊಂಡಿದ್ದೆ, ಅದು ಮುಂದುವರಿಯುತ್ತಿರುವುದು ಇನ್ನೂ ಸಂತೋಷದ ವಿಚಾರ. ಇದರ ಟೈಟಲ್ ಸಾಂಗ್ ಕೇಳಿದರೆ ಸಾಕು ರೋಮಾಂಚನ ಅನ್ನಿಸುತ್ತದೆ. ವಾಸ್ತವದಲ್ಲಿ ನನ್ನನ್ನು ಯಾರೂ ಗುರುತಿಸದಷ್ಟು ಗೆಟಪ್ ಈ ಪಾತ್ರಕ್ಕಿದೆ. ಲಂಗ ದಾವಣಿಯಲ್ಲಿ ಪ್ರಬುದ್ಧಳಾಗಿ ಕಾಣಿಸುತ್ತೇನೆ. ಸ್ಕ್ರೀನ್ ಚಹರೆಗೂ ನನಗೂ ಅಜಗಜಾಂತರವಿದೆ. ■